# ಜಾನಪದತಜ್ಞೆ ಶ್ರೀಮತಿ ಶಾಂತಿನಾಯಕರ ಬದುಕು-ಬರಹ

**ಕರ್ನಾಟಕ ವಿಶ್ವವಿದ್ಯಾಲಯ**

**ಧಾರವಾಡ**

**ಸಂಶೋಧನಾರ್ಥಿ**

**ಅನಂತ ಭಟ್**

**REG NO:17A01001**

**ಮಾರ್ಗದರ್ಶಕರು**

**ಡಾ॥ ಸುರೇಶ ನಾರಾಯಣ ನಾಯ್ಕ( ಎಂ.ಎ.ಎಮ್.ಬಿ.ಎ, ಪಿ.ಹೆಚ್.ಡಿ)**

**ಅಂಜುಮಾನ್ ಪದವಿ ಕಾಲೇಜು ಹಾಗೂ**

**ಸ್ನಾತಕೋತ್ತರ ಕೇಂದ್ರ**

**ಅಂಜುಮಾನ್ ಬಾದ, ಭಟ್ಕಳ(ಉ.ಕ)**

ಕನ್ನಡ ಎಂ.ಎ. ಪದವಿಗಾಗಿ ಕರ್ನಾಟಕದ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲಾದ ಪ್ರಬಂಧ

**ಸ್ನಾತಕೋತ್ತರ ಪದವಿ (ಎಂ.ಎ)**

**ಮೇ-2019**

# ಪ್ರಮಾಣ ಪತ್ರ

**ಜಾನಪದ ತಜ್ಞೆ ಶ್ರೀಮತಿ ಶಾಂತಿನಾಯಕರ** ಬದುಕು-ಬರಹ ಎಂಬ ಕಿರು ಸಂಶೋಧನಾ ಪ್ರಬಂಧವನ್ನು **ಶ್ರೀ ಅನಂತ ಭಟ್** ಇವರು ಎಂ.ಎ (ಕನ್ನಡ) ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ **ಡಾ॥ಆರ್.ಸಿ ಹಿರೇಮಠ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವ ವಿದ್ಯಾಲಯಕ್ಕೆ** ಸಾದರಪಡಿಸಿದ್ದಾರೆ, ಪ್ರಸ್ತುತ ಪ್ರಬಂಧ ಈ ಮೊದಲು ಇಡಿಯಾಗಿ ಇಲ್ಲವೆ ಬಿಡಿಯಾಗಿ ಎಲ್ಲವೂ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

**ಸ್ಥಳ: ಭಟ್ಕಳ**
**ದಿನಾಂಕ:** 11-05-2019

**ಮಾರ್ಗದರ್ಶಕರು**
**ಡಾ॥ ಸುರೇಶ ನಾರಾಯಣ ನಾಯ್ಕ**

# ಪರಿವಿಡಿ


| ಅಧ್ಯಾಯಗಳು | ಪುಟ ಸಂಖ್ಯೆ |
|---|---|
| ಅಧ್ಯಾಯ – ಒಂದು<br>ಅಧ್ಯಯನದ ಉದ್ದೇಶಮತ್ತು ವ್ಯಾಪ್ತಿ | 01–02 |
| ಅಧ್ಯಾಯ–ಎರಡು<br>ಜನಪದ ಪರಂಪರೆ | 03–21 |
| ಅಧ್ಯಾಯ–ಮೂರು<br>ಶ್ರೀಮತಿ ಶಾಂತಿನಾಯಕರ ಜೀವನ – ಸಾಧನೆ<br>೧. ಬಾಲ್ಯ<br>೨. ವಿದ್ಯಾಭ್ಯಾಸ<br>೩. ವೃತ್ತಿ ಜೀವನ<br>೪. ಕೌಟುಂಬಿಕ ಜೀವನ<br>೫. ಆಹಾರ– ಉಡುಪು– ದಿನಚರಿ<br>೬. ಸ್ನೇಹ ಸಂಬಂಧ<br>೭. ಪ್ರಭಾವ ಬೀರಿದವರು<br>೮. ಸಾಹಿತ್ಯ ಕೃಷಿ<br>೯. ಪ್ರಶಸ್ತಿಗಳು– ಗೌರವ ಪುರಸ್ಕಾರಗಳು | 22–27 |
| ಅಧ್ಯಾಯ–ನಾಲ್ಕು<br>ಶ್ರೀಮತಿ ಶಾಂತಿನಾಯಕರ ಬರಹಗಳು<br>೧. ಜಾನಪದ ಸಂಗ್ರಹ ಕೃತಿಗಳು<br>೨. ಜಾನಪದ ವಿಮರ್ಶಾ ಕೃತಿಗಳು<br>೩. ಜಾನಪದ ಔಷಧೀಯ ಕೃತಿಗಳು<br>೪. ಜಾನಪದ ಅಡುಗೆ, ಆಹಾರ ಪಾನೀಯ ಕೃತಿಗಳು<br>೫. ಜಾನಪದ ಪರಿಚಯಾತ್ಮಕ ಕೃತಿಗಳು<br>೬. ಜಾನಪದ ಸಾಹಿತ್ಯ ಮತ್ತು ವೈಚಾರಿಕ ಕೃತಿಗಳು | 28–57 |
| ಅಧ್ಯಾಯ– ಐದು<br>ಶ್ರೀಮತಿ ಶಾಂತಿನಾಯಕರ ಕೃತಿಯೊಂದಿಗೆ ಮುಖಾಮುಖಿ | 58–61 |
| ಅಧ್ಯಾಯ– ಆರು<br>ಅನನ್ಯ ಸಾಧಕಿ ಶ್ರೀಮತಿ ಶಾಂತಿನಾಯಕರು | 62–66 |
| ಅಧ್ಯಾಯ– ಏಳು<br>• ಸಮಾರೋಪ | 67 |
| • ಅನುಬಂಧಗಳು<br>೧. ಅನುಬಂಧ–1 ಶ್ರೀಮತಿ ಶಾಂತಿನಾಯಕರ ಛಾಯಾಚಿತ್ರಗಳು<br>೨. ಅನುಬಂಧ–2 ಶಾಂತಿನಾಯಕರ ವಂಶಾವಳಿ<br>೩. ಶ್ರೀಮತಿ ಶಾಂತಿನಾಯಕರ ಪ್ರಕಟಿತ ಕೃತಿಗಳ ಯಾದಿ<br>೪. ಅನುಬಂಧ–3 ಗ್ರಂಥಋಣ | 68–69<br>70<br>71<br>72 |

# ಅಧ್ಯಾಯ-1

## ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರಾಚೀನಕಾಲದಿಂದ ಮೊದಲಗೊಂಡು ಇಂದಿನ ಆಧುನಿಕ ಯುಗದಲ್ಲೂ ಕೂಡ ಸಾಹಿತ್ಯಕ್ಷೇತ್ರದಲ್ಲಿ ತೊಡಗಿಸಿಕೊಂಡ ಮಹಿಳೆಯರ ಸಂಖ್ಯೆ ತೀರ ವಿರಳವೆ, ಅದರಲ್ಲೂ ಜಾನಪದ ಒಡಲನ್ನು ಪ್ರವೇಶಿಸಿ ಕ್ಷೇತ್ರಕಾರ್ಯ ಕೈಗೊಂಡು ಕೃತಿ ಸಂಪಾದನೆ ಮಾಡಿದ ಮಹಿಳಾ ಸಾಧಕಿಯರಂತೂ ಅತಿ ವಿರಳವೇ ಎನ್ನಬಹುದು, ಇಂತಹ ಅತಿವಿರಳ ಜಾನಪದ ಅತಿ ವಿರಳ ಮಹಿಳಾ ಸಾಧಕಿಯರ ಸಾಲಿನಲ್ಲಿ ಉಜ್ವಲ-ಪ್ರಜ್ವಲ ಸ್ಪಟಿಕಮಣಿ ರೂಪಿಯಾಗಿ ಕಂಗೊಳಿಸುತ್ತಿರುವರು ಶ್ರೀಮತಿ ಶಾಂತಿನಾಯಕರು.

ಆಧುನಿಕತೆಯ ಗಾಢತೆಯ ಪ್ರಭಾವದಿಂದ ಸಂಕೀರ್ಣ ಬದುಕು ಆವರಿಸಿಕೊಳ್ಳುವ ಸನ್ನಿವೇಶದಲ್ಲಿ ಜನಪದರ ಬದುಕು-ಸಾಹಿತ್ಯ-ಸಾಂಸ್ಕೃತಿಕ ಕಲೆ ಮರೆಯಾಗುತ್ತಿರುವ ಅಶುಭ ಕಾಲಘಟ್ಟದಲ್ಲಿ ಜನಪದರ ನಡುವೆ ಇದ್ದು ನಿರ್ಮಲ ಜಾನಪದೀಯ ಬದುಕನ್ನು ಪುನರ್ ಕಟ್ಟಿಕೊಡುವ ಮೂಲಕ ಜಾನಪದ ಸಂಸ್ಕೃತಿಯಲ್ಲಿನ ಭವ್ಯತೆಯ ದಿವ್ಯತೆಯ ಅಂಶಗಳನ್ನು ಮನಗಾಣಿಸುವ ಮೂಲಕ ಸೇವಾಕಾರ್ಯದಲ್ಲಿ ಜನಪದೀಯ ಅಂಶಗಳ ಕಲೆಹಾಕುವ ಕಾಯಕದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಶಾಂತಿನಾಯಕರ ದುಡಿಮೆ ಅತ್ಯಂತ ಶ್ಲಾಘನೀಯವಾದುದಾಗಿದೆ.

ವಿಶೇಷತಃ ಜಾನಪದ ಕ್ಷೇತ್ರಕ್ಕೆ ಸಲ್ಲಿಸುತ್ತಿರುವ ಸೇವೆಯನ್ನು ಪರಿಗಣಿಸಿ, ದಾಖಲೀಕರಣವನ್ನು ಹಾಗೂ ಅವರು ಲೋಕಾರ್ಪಣೆಗೈದ ಜಾನಪದಕ್ಕೆ ಸಂಬಂಧಿತ ಮೊವತ್ತೈದು ಅಧಿಕ ಗ್ರಂಥಗಳನ್ನು ಪರಿಶೀಲಿಸಿ ಕರ್ನಾಟಕ ಜಾನಪದ ಪರಿಷತ್ತು, ಜಾನಪದ ಅಕಾಡೆಮಿ-ಬೆಂಗಳೂರುದಿವರು "ಜಾನಪದತಜ್ಞೆ" ಎನ್ನುವ ಗೌರವ ಬಿರುದಾಂಕಿತವನ್ನು ನೀಡಿರುತ್ತಾರೆ.

ಶ್ರೀಮತಿ ಶಾಂತಿನಾಯಕರು **"ಉತ್ತರ ಕನ್ನಡಜಿಲ್ಲೆಯ ಹವ್ಯಕ ಜನಪದ ಕಥೆಗಳು"** ಈ ಗ್ರಂಥವನ್ನು ಓದಿದಾಗ ನನಗೆ ಇವರ ನಿರೂಪಣಾ ಶೈಲಿ ಇಷ್ಟವಾದರಿಂದ ನನಗೆ ಇವರ ಸಾಹಿತ್ಯದ ಅಧ್ಯಯನದ ಬಗೆಗೆಆಸಕ್ತಿ ಹುಟ್ಟಿಕೊಂಡಿತು.

ಇವರ ಜನಪದ ಸಾಹಿತ್ಯದಲ್ಲಿ ಅಡಕಗೊಂಡಿರುವ ಜನಪದ ಸಂಗ್ರಹಕೃತಿಗಳು ಜಾನಪದ ವಿಮರ್ಶ ಕೃತಿಗಳು, ಜಾನಪದ ಆಹಾರ ಪಾನೀಯಗಳು, ಜಾನಪದ ಔಷಧಿಯ ಕೃತಿಗಳು, ಇವುಗಳನ್ನು ಒಂದಡೆಯಲ್ಲಿ ಪರಿಚಯಿಸುವ ಉದ್ದೇಶದಿಂದ ಈಕಿರು ಪ್ರಬಂಧವನ್ನು ಕೈಗೆತ್ತಿಕೊಂಡಿರುವೆನು.

ಜಾನಪದ ಕ್ಷೇತ್ರಕಾರ್ಯದಲ್ಲಿ ತಮ್ಮ ತಾವು ತೊಡಗಿಸಿಕೊಂಡು ಜಾನಪದದಲ್ಲಿ ದಿವ್ಯತೆಯ ಭವ್ಯತೆಯ ಅಂಶಗಳನ್ನು ಮನಗಾಣಿಸುವ ಮೂಲಕ-ಜನಪದರ ಬದುಕನ್ನು ಪುನರ್ ಕಟ್ಟಿಕೊಡುವ ಕಳಕಳೀಯ ಮನೋಭಾವವನ್ನು ತೋರ್ಪಡಿಸುವುದು ಈ ಕಿರು ಪ್ರಬಂಧದ ಉದ್ದೇಶವಾಗಿದೆ.

ಶ್ರೀಮತಿ ಶಾಂತಿನಾಯಕರ ಸಮಗ್ರಕೃತಿ, ಬಡಿಲೇಖನ, ಭಾಷಣ, ಜಾನಪದ ಕೃತಿಗಳು, ವೈಚಾರಿಕ ಕೃತಿಗಳು ಹಾಗೂ ಸಂಪಾದನಾ ಕೃತಿಗಳು ವ್ಯಾಪ್ತಿಯನ್ನು ಕಿರು ಪ್ರಬಂಧವು ಒಳಗೊಂಡಿರುತ್ತದೆ.

ಒಟ್ಟಾರೆಯಾಗಿ ಶ್ರೀಮತಿ ಶಾಂತಿನಾಯಕರ ಬದುಕು-ಬರಹ ಕುರಿತು ವಿಸ್ತೃತ ಮಾಹಿತಿಗಳು ಒಂದೆಡೆಸಿಗಲಿ ಎನ್ನುವ ಹಿನ್ನಲೇಯಲ್ಲಿ ನನ್ನ ಎಮ್.ಎ (ಕನ್ನಡ) ಪದವಿಗೆ ಸಾದರ ಪಡಿಸುವ ಸದುದ್ದೇಶ ಈ ಕಿರು ಪ್ರಬಂಧದ್ದಾಗಿರುತ್ತದೆ.

## ಅಧ್ಯಾಯ- ಏಳು

# ಸಮಾರೋಪ

ಶ್ರೀಮತಿ ಶಾಂತಿ ನಾಯಕರು ಕೌಟುಂಬಿಕ ಪರಿಸರ, ವಿವಿಧ ಸಾಹಿತಿಗಳ ಪ್ರಭಾವ, ವಿದ್ಯಾಗುರುಗಳ ಪ್ರಭಾವ ಹಾಗೂ ತಮ್ಮ ಪತಿಯ ಪ್ರಭಾವಕ್ಕೆ ಒಳಗಾಗಿ ಜನಪದ ಕ್ಷೇತ್ರ ಕಾರ್ಯದಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡರು. ಕರ್ಕಿಯ ಪ್ರೌಢಶಾಲೆಯ ಶಿಕ್ಷಕಿಯಾಗಿ, ಮುಖ್ಯ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ವೃತ್ತಿಯಲ್ಲಿ ನಿವೃತ್ತರಾದರೂ ಸೃಜನಶೀಲ ಬರಹಗಾರ್ತಿಯಾಗಿ ದುಡಿಯುತ್ತಲೇ ಇದ್ದಾರೆ.

ತನ್ನ ಪತಿ ಹಾಗೂ ಮಗಳ ಕ್ಷೇತ್ರ ಕಾರ್ಯದಲ್ಲಿ ಸಹಾಯ, ಸಹಕಾರ ನೀಡಿದ ಅನುಭವ ಇವರಿಗಿದೆ. ಜನಪದ ಸಾಹಿತ್ಯವನ್ನು ಕಟ್ಟಿ ಬೆಳೆಸುವ ಕಳಕಳಿಯನ್ನು ಹೊಂದಿದ್ದ ಇವರು ಅನೇಕ ಕೃತಿಗಳನ್ನು ಕನ್ನಡ ವಾಙ್ಮಯಕ್ಕೆ ಸಮರ್ಪಿಸಿದ್ದಾರೆ.

ಇವರ ಕೃತಿಗಳನ್ನು ಅವಲೋಕಿಸಿದಾಗ ಸಂಗ್ರಹಣೆಯಲ್ಲಿ ಕಂಡುಬರುವ ವೈಜ್ಞಾನಿಕ ಹಿನ್ನೆಲೆಯ ವ್ಯವಸ್ಥಿತ ವರ್ಗೀಕರಣ, ಸಂಗ್ರಹಿತ ವಿಷಯದ ಕುರಿತಾಗಿ ಇರುವ ಕಳಕಳಿಯ ಮನೋಭಾವ, ಆರೋಗ್ಯಭಾವ ಅರ್ಥಪೂರ್ಣವಾಗಿದೆ.

ಕಥೆಯಲ್ಲಿನ ಪದಪುಂಜಗಳು ಜನಸಾಮಾನ್ಯರಿಗೆ ಮನಮುಟ್ಟುವಂತೆ ಪ್ರಸ್ತುತಪಡಿಸುವ ಕಥಾನಿರೂಪಣಾ ಶೈಲಿ ಎಲ್ಲವೂ ಮನೋಹರವಾಗಿದೆ. ಜಾನಪದ ಕುರಿತಾದ ಲೇಖನಗಳ ಸಂಗ್ರಹವೂ ಕೂಡ ಸಂಸ್ಕೃತಿ-ನಂಬಿಕೆ-ವಿಶ್ವಾಸ-ಪರಿಸರ ಪ್ರೇಮವನ್ನು ಪ್ರತಿನಿಧಿಸುವ ಮೂಲಕ ಜನಪದರ ಬದುಕಿನ ಹಲವು ನಿಯಮಗಳನ್ನು ಅನಾವರಣಗೊಳಿಸುತ್ತದೆ.

ಶಾಂತಿನಾಯಕರ ವೈಚಾರಿಕತೆಯ ಪ್ರತಿಬಿಂಬದಂತಿರುವ ಮೂಢನಂಬಿಕೆ, ಸ್ತ್ರೀಸಂವೇದನೆ ಈ ಮುಂತಾದ ಕೃತಿಗಳಲ್ಲಿ ಯಾರ ಮೇಲೂ ಸೇಡು ತಿರಿಸಿಕೊಳ್ಳುವ ಇರಾದೆ ಇಲ್ಲ. ಬದಲಾಗಿ ತಪ್ಪು ಗ್ರಹಿಕೆಯಿಂದ ಒಪ್ಪಿಕೊಂಡು ಬಂದಿರುವ ಹಲವು ಆಚರಣೆ, ನಂಬಿಕೆಗಳನ್ನು ತಿದ್ದಿಕೊಳ್ಳಬೇಕೆಂಬ ಪರಿಪ್ರಜ್ಞೆ ಒಳಮೂಡುವ ರೀತಿಯಲ್ಲಿ ತಮ್ಮ ನಿಲುವುಗಳನ್ನು ಸಾದರಪಡಿಸಿದ್ದಾರೆ. ಹಾಗೂ ಜತನದಿಂದ ಔಷಧಿ ಸಸ್ಯಗಳನ್ನು ಉಳಿಸೋಣ ಎನ್ನುವ ಹಿನ್ನೆಲೆಯೊಂದಿಗೆ, ಆರೋಗ್ಯ ವರ್ಧನೆಯೊಂದಿಗೆ, ಪರಿಸರ ವೈಶಿಷ್ಟ್ಯತೆಯನ್ನು, ಪರಿಸರ ಪ್ರೇಮವನ್ನು ಉಲ್ಲೇಖಿಸಿದ್ದಾರೆ.

ಬಹುಮುಖ ಪ್ರತಿಭೆವುಳ್ಳ ಶಾಂತಿನಾಯಕರ ಕಾರ್ಯಕ್ಷೇತ್ರ ಕೇವಲ ಜನಪದಕ್ಕೆ ಮಾತ್ರ ಸೀಮಿತಗೊಳ್ಳದೇ ಜಾನಪದ ಕ್ಷೇತ್ರದೊಂದಿಗೆ ಮಹಿಳಾ ಕ್ಷೇತ್ರ, ಸಹಕಾರ ಕ್ಷೇತ್ರ, ಸಾಕ್ಷರತಾ ಕ್ಷೇತ್ರ, ಪರಿಸರ ಕ್ಷೇತ್ರ ಹಾಗೂ ಹತ್ತು ಹಲವು ವಲಯಗಳಲ್ಲಿ ಸೇವೆಯನ್ನು ಸಮರ್ಪಿಸುವುದರೊಂದಿಗೆ ಅನನ್ಯ ಸಾಧಕಿಯಾಗಿದ್ದಾರೆ.